ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಸರ್ಕಾರಿ ಶಾಲೆಗಳ ಆಸ್ತಿ ಕುರಿತು

ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-

1467 (1736) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನಲ್ಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಹೆಸರಿನಲ್ಲಿ ಎಷ್ಟು ಆಸ್ತಿ ಇರುತ್ತದೆ; ಇವುಗಳನ್ನು ಶಾಲೆ ಹೆಸರಿನಲ್ಲಿ ನೋಂದಾಯಿಸಿದೆಯೇ ; ಇಲ್ಲದೆ ಇದ್ದರೆ, ಕಾರಣವೇನು ; (ಪ್ರತ್ಯೇಕವಾಗಿ ಶಾಲೆಗಳ ವಿವರ ನೀಡುವುದು)

(ಆ) ಕಳೆದ 3 ಆರ್ಥಿಕ ವರ್ಷದಲ್ಲಿ ಯಲಹಂಕ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದಲ್ಲಿ ಲೆಕ್ಕ ಪತ್ರಗಳಿಗೆ ಸಂಬಂಧಿಸಿದಂತೆ ಆಡಿಟ್ ಆಗಿದೆಯೇ ; ಆಗಿದ್ದಲ್ಲಿ, ಆಕ್ಷೇಪಣೆಗಳು ಇದೆಯೇ ; ಇದ್ದರೆ, ಅದರ ಮೇಲೆ ಏನು ಕ್ರಮ ಆಗಿದೆ ; (ಆಡಿಟ್ ವರದಿ ಪ್ರತಿ ನೀಡುವುದು)

(ಇ) ಯಲಹಂಕ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದಲ್ಲಿರುವ ಶಿಕ್ಷಕೇತರ ಸಿಬ್ಬಂದಿ ಎಷ್ಟು ; ಇವರು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ; (ವಿವರ ನೀಡುವುದು)

(ಈ) ಕಳೆದ 3 ವರ್ಷ ಅವಧಿಯಲ್ಲಿ ಯಲಹಂಕ ತಾಲ್ಲೂಕಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಮಕ್ಕಳ ಸಂಖ್ಯೆ ಎಷ್ಟು ; ಇವರಿಗೆ ಎಷ್ಟು ಶೂ ಮತ್ತು ಸಾಕ್ಸ್ ನೀಡಲಾಗಿದೆ ; (ವಿವರ ನೀಡುವುದು)

(ಉ) ಕಳೆದ 3 ವರ್ಷಗಳಲ್ಲಿ ಯಲಹಂಕ B.E.O ಎಷ್ಟು ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿರುತ್ತಾರೆ ? (ವಿವರ ನೀಡುವುದು)